ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ - 583 105
VIJAYANAGARA SRI KRISHNADEVARAYA UNIVERSITY
"Jnana Sagara" Campus, Vinayaka Nagara, Cantonment, BALLARI - 583 105
REGISTRAR
☎ 08392-242703

ಸಂಖ್ಯೆ:ವಿ.ಶ್ರೀಕೃವಿಬ/ವಿಮವಿ/ಶೈವೇ/2018-19:83 ದಿನಾಂಕ: 19.04.2018

## ಅಧಿಸೂಚನೆ

ವಿಷಯ: 2018–19ನೇ ಸಾಲಿನ ಸ್ನಾತಕ (UG) ಕೋರ್ಸ್‌ಗಳ ಶೈಕ್ಷಣಿಕ ವೇಳಾಪಟ್ಟಿ (ಸೆಮಿಸ್ಟರ್ ಪದ್ಧತಿ)

ಉಲ್ಲೇಖ: 01. ಮಾನ್ಯ ಕುಲಪತಿಗಳು ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯ ಪ್ರಕಾರ, ದಿನಾಂಕ: 11.04.2018
02. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:19.04.2018

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖ-02ರ ಮಾನ್ಯ ಕುಲಪತಿಗಳ ಅನುಮೋದನೆಗೆ ಮೇರೆಗೆ, 2018-19ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸುಗಳ ಆರಂಭದ ದಿನಾಂಕವನ್ನು ಈ ಕೆಳಕಂಡಂತೆ ರಚಿಸಿ ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

| ಕ್ರ ಸಂ. | ವಿವರ | ದಿನಾಂಕ |
|---|---|---|
| 1. | 2018 – 19ನೇ ಶೈಕ್ಷಣಿಕ ವರ್ಷದ ಪ್ರಾರಂಭ | 18.06.2018 |
| 2. | 3 ಮತ್ತು 5ನೇ ಸೆಮಿಸ್ಟರ್ ತರಗತಿಗಳ ಆರಂಭ | 02.07.2018 |
| 3. | 1, 3 ಮತ್ತು 5ನೇ ಸೆಮಿಸ್ಟರ್‌ನ ಪ್ರವೇಶಾತಿಗೆ ದಂಡರಹಿತ ಕೊನೆಯ ದಿನಾಂಕ ಹಾಗೂ 1ನೇ ಸೆಮಿಸ್ಟರ್‌ನ ತರಗತಿ ಪ್ರಾರಂಭ | 09.07.2018 |
| 4. | ದಂಡರಹಿತ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿ ಹಾಗೂ ಶುಲ್ಕವನ್ನು ವಿ.ವಿ.ಗೆ ಸಲ್ಲಿಸಲು ಕೊನೆಯ ದಿನಾಂಕ | 16.07.2018 |
| 5. | ದಂಡಶುಲ್ಕದೊಂದಿಗೆ ಪ್ರವೇಶ ಪಡೆಯಲು ಕೊನೆಯ ದಿನಾಂಕ | 25.07.2018 |
| 6. | ಅಂತರ್ ಮಹಾವಿದ್ಯಾಲಯ ವರ್ಗಾವಣೆಗೆ ಕೊನೆಯ ದಿನಾಂಕ | 25.07.2018 |
| 7. | ದಂಡಸಹಿತವಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿ ಹಾಗೂ ಶುಲ್ಕವನ್ನು ವಿ.ವಿ.ಗೆ ಸಲ್ಲಿಸಲು ಕೊನೆಯ ದಿನಾಂಕ | 30.07.2018 |
| 8. | ಅಂತರ್ ಮಹಾವಿದ್ಯಾಲಯ ವರ್ಗಾವಣೆ ಹಾಗೂ ಅದರ ವಿವರಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 03.08.2018 |
| 9. | ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಆನ್‌ಲೈನ್ ಮೂಲಕ ವಿವರ ಸಲ್ಲಿಸಲು ಕೊನೆಯ ದಿನಾಂಕ | 13.08.2018 |
| 10. | ಆಂತರಿಕ ಪರೀಕ್ಷೆಗಳ (IA) ಅಂಕಪಟ್ಟಿಗಳನ್ನು ವಿ.ವಿ.ಗೆ ಸಲ್ಲಿಸಲು ಕೊನೆಯ ದಿನಾಂಕ | 23.10.2018 |
| 11. | 1, 3 ಹಾಗೂ 5ನೇ ಸೆಮಿಸ್ಟರ್‌ನ ಕೊನೆಯ ದಿನಾಂಕ | 31.10.2018 |
| 12. | 1, 3 ಹಾಗೂ 5ನೇ ಸೆಮಿಸ್ಟರ್‌ನ ಪರೀಕ್ಷೆ ಆರಂಭ | 12.11.2018 |
| 13. | ರಜೆ, ಪರೀಕ್ಷಾ ಕೆಲಸ ಹಾಗೂ ಮೌಲ್ಯಮಾಪನ | 01.11.2018 ರಿಂದ 30.12.2018 |
| 14. | 2, 4 ಮತ್ತು 6ನೇ ಸೆಮಿಸ್ಟರ್ ಆರಂಭ | 01.01.2019 |
| 15. | 2, 4 ಮತ್ತು 6ನೇ ಸೆಮಿಸ್ಟರ್‌ನ ಆಂತರಿಕ ಅಂಕಪಟ್ಟಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 13.04.2019 |
| 16. | 2, 4 ಮತ್ತು 6ನೇ ಸೆಮಿಸ್ಟರ್‌ನ ಕೊನೆಯ ದಿನಾಂಕ | 20.04.2019 |
| 17. | 2, 4 ಮತ್ತು 6ನೇ ಸೆಮಿಸ್ಟರ್ ಪರೀಕ್ಷೆ ಆರಂಭ ಮತ್ತು ಪರೀಕ್ಷಾ ಕೆಲಸ ಹಾಗೂ ಮೌಲ್ಯಮಾಪನ ಕಾರ್ಯ | 29.04.2019 ರಿಂದ 31.05.2019 |
| 18. | ಬೇಸಿಗೆ ರಜೆ | 21.04.2019 ರಿಂದ 31.05.2019 |
| 19. | 1, 3 ಹಾಗೂ 5ನೇ ಸೆಮಿಸ್ಟರ್ ಆರಂಭ (2019–20 ನೇ ಶೈಕ್ಷಣಿಕ ವರ್ಷ) | 01.06.2019 |

**ಸೂಚನೆಗಳು:**

1. ಮೇಲೆ ನಮೂದಿಸಿದ ದಿನಗಳ ರಜೆ ಎಂದು ಘೋಷಿಸಿದಲ್ಲಿ ತದನಂತರ ದಿನವನ್ನು ಪರಿಗಣಿಸುವುದು.
2. ಪರೀಕ್ಷೆಗಳಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ಕುಲಸಚಿವರು (ಮೌಲ್ಯಮಾಪನ), ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರು ಕಾಲ ಕಾಲಕ್ಕೆ ಪ್ರಕಟಿಸುವರು.
3. ಸರ್ಕಾರ/ವಿಶ್ವವಿದ್ಯಾಲಯ ಮುಂದಿನ ದಿನಗಳಲ್ಲಿ ಈ ಶೈಕ್ಷಣಿಕ ವೇಳಾಪಟ್ಟಿಯನ್ನು ಒಂದು ವೇಳೆ ಬದಲಾವಣೆ ಮಾಡಿದ್ದಲ್ಲಿ ಈ ವೇಳಾಪಟ್ಟಿಯು ಬದಲಾವಣೆಗೆ ಒಳಪಡಬಹುದು.
4. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬೋಧಕ ಸಿಬ್ಬಂದಿಗಳಿಗೆ ರಜಾ ಅವಧಿಯಲ್ಲಿ ಪರೀಕ್ಷೆ ಕೆಲಸಗಳನ್ನು ಕಡ್ಡಾಯಗೊಳಿಸಲಾಗಿದೆ.

ಪು.ತಿ.ನೋ

5. ಈ ಅಧಿಸೂಚನೆಯಲ್ಲಿ ನಮೂದಿಸಿರುವ ದಿನಾಂಕಗಳಂದೇ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳು ಆಯಾ ಕೋರ್ಸುಗಳಿಗೆ ನಿಯಮಾನುಸಾರ ಪ್ರವೇಶ ಮಾಡಿಕೊಳ್ಳತಕ್ಕದ್ದು.
6. ಸ್ನಾತಕ 3 ಮತ್ತು 5ನೇ ಸೆಮಿಸ್ಟರ್‌ಗೆ ಒಂದು ಮಹಾವಿದ್ಯಾಲಯದಿಂದ ಇನ್ನೊಂದು ಮಹಾವಿದ್ಯಾಲಯಕ್ಕೆ ಅಂತರ ಮಹಾವಿದ್ಯಾಲಯಗಳ ವರ್ಗಾವಣೆ ಮಾಡಿಕೊಳ್ಳುವಾಗ ವಿದ್ಯಾರ್ಥಿ/ನಿಯಿಂದ ಭರ್ತಿ ಮಾಡಿದ ನಿಗದಿತ ಅರ್ಜಿ ನಮೂನೆಯನ್ನು ಪಡೆದುಕೊಳ್ಳುವುದು. ನಂತರ ವಿಶ್ವವಿದ್ಯಾಲಯದಿಂದ ವರ್ಗಾವಣೆ ಆದೇಶ ಪತ್ರ ಬಂದ ಮೇಲೆ ತರಗತಿಗಳಿಗೆ ಅವಕಾಶ ಮಾಡಿಕೊಳ್ಳುವುದು ಹಾಗೂ ಅಂತಹ ವಿದ್ಯಾರ್ಥಿಗಳ ಪಟ್ಟಿಯನ್ನು ಶುಲ್ಕ ಸಹಿತ ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.
7. ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸಿ ಹೆಸರು ತಿದ್ದುಪಡಿ ಹಾಗೂ ವಿಷಯ ಬದಲಾವಣೆಗಳಿದ್ದಲ್ಲಿ ನಿಗದಿತ ಅವಧಿಯೊಳಗೆ ಮಾಡಬಹುದಾಗಿದೆ.
8. ವಿಶ್ವವಿದ್ಯಾಲಯದ ಸುತ್ತೋಲೆಗಳಿಗೆ ಆದ್ಯತೆ ನೀಡಿ ತ್ವರಿತವಾಗಿ ಸ್ಪಂದಿಸುವುದು.

**ಪ್ರಾಂಶುಪಾಲರುಗಳಿಗೆ ಸೂಚನೆಗಳು:**

1. ಕಡೆಯ ದಿನಾಂಕದ ನಂತರದ ಪ್ರವೇಶಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಈ ಬಗ್ಗೆ ಪ್ರಾಚಾರ್ಯರು ಕಟ್ಟುನಿಟ್ಟಿನ ನಿಗಾ ವಹಿಸತಕ್ಕದ್ದು, ಒಂದು ವೇಳೆ ನಿಗದಿತ ವೇಳೆಯ ನಂತರ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೇ ಆದಲ್ಲಿ, ಅಂತಹ ವಿದ್ಯಾರ್ಥಿಗಳ ಪ್ರವೇಶವನ್ನು ಅಸಿಂಧುಗೊಳಿಸಲಾಗುವುದು ಹಾಗೂ ಅದಕ್ಕೆ ಆಯಾ ಪ್ರಾಚಾರ್ಯರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
2. ಪ್ರಥಮ ವರ್ಷಕ್ಕೆ ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಈ ಕೆಳಕಂಡ ದಾಖಲೆಗಳನ್ನು ಸಂಬಂಧಿಸಿದ ಕಾಲೇಜಿಗೆ ಹಾಜರುಪಡಿಸಬೇಕು.

    1. ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿಯ ದ್ವಿತೀಯ ಪಿ.ಯು.ಸಿ ಮೂಲ ಅಂಕಪಟ್ಟಿ, ರಾಜ್ಯ ಅಥವಾ ಕೇಂದ್ರದಿಂದ ಮಾನ್ಯತೆ ಪಡೆದ 10+2 ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಮೂಲ ಅಂಕಪಟ್ಟಿ ಪಡೆದಿದ್ದು, ಸ್ನಾತಕ ಪದವಿಗೆ ಪ್ರವೇಶ ಪಡೆಯಲು ಅರ್ಹರಿರಬೇಕು.
    2. ಪದವಿ ವ್ಯಾಸಾಂಗಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಈ ಹಿಂದಿನ ಮಹಾವಿದ್ಯಾಲಯಗಳ ಮೂಲ ವರ್ಗಾವಣೆ ಪತ್ರಗಳನ್ನು ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.
    3. ಕರ್ನಾಟಕ ರಾಜ್ಯ ಪದವಿ ಪೂರ್ವ ಶಿಕ್ಷಣ ಮಂಡಳಿಯನ್ನು ಹೊರತುಪಡಿಸಿ ಅನ್ಯ ರಾಜ್ಯದ ಮಾನ್ಯತೆ ಪಡೆದ ಹಾಗೂ ಅಂತಹ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಸಲ್ಲಿಸಿ ಅನುಮೋದನೆಯನ್ನು ಪಡೆಯತಕ್ಕದ್ದು.
    4. ವ್ಯಾಸಾಂಗ ನಿಲುಗಡೆಗೊಂಡ ಹಳೆಯ ವಿದ್ಯಾರ್ಥಿಗಳಿಗೆ ಮರು ಪ್ರವೇಶ ನೀಡುವ ಮುನ್ನ ವಿಶ್ವವಿದ್ಯಾಲಯದ ಪರಿನಿಯಮಾವಳಿಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯದ ಅನುಮತಿ ಪಡೆಯುವುದು ಕಡ್ಡಾಯ, ಅಂತಹ ವಿದ್ಯಾರ್ಥಿಗಳ ಪ್ರತ್ಯೇಕ ಪಟ್ಟಿಯನ್ನು ಶುಲ್ಕ ಸಹಿತ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಒಂದು ಪಕ್ಷ ಅನುಮತಿ ಪಡೆಯದೇ ಪ್ರವೇಶ ಮಾಡಿದ ಪಕ್ಷದಲ್ಲಿ ಆಗುವ ತೊಂದರೆಗಳಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳೇ ಹೊಣೆಗಾರರು.

**ಕುಲಸಚಿವರು**
**ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ**
**ಬಳ್ಳಾರಿ**

ಪ್ರತಿಗಳು:

1. ಮಾನ್ಯ ಕುಲಪತಿಗಳ, ಆಪ್ತಕಾರ್ಯದರ್ಶಿ ವಿಶ್ರಿಕೃ ವಿಶ್ವವಿದ್ಯಾಲಯ, ಬಳ್ಳಾರಿ.
2. ಮಾನ್ಯ ಕುಲಸಚಿವರು, (ಮೌಲ್ಯಮಾಪನ), ವಿಶ್ರಿಕೃ ವಿಶ್ವವಿದ್ಯಾಲಯ, ಬಳ್ಳಾರಿ.
3. ಹಣಕಾಸು ಅಧಿಕಾರಿಗಳು, ವಿಶ್ರಿಕೃ ವಿಶ್ವವಿದ್ಯಾಲಯ, ಬಳ್ಳಾರಿ.
4. ಎಲ್ಲಾ ನಿಕಾಯದ ಡೀನರು, ವಿಶ್ರಿಕೃ ವಿಶ್ವವಿದ್ಯಾಲಯ, ಬಳ್ಳಾರಿ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
6. ಎಲ್ಲಾ ಸಂಯೋಜಿತ ಸ್ನಾತಕ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳನ್ನೊಳಗೊಂಡಂತೆ.
7. ಕಛೇರಿ ಪ್ರತಿ.